ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

6

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: ೨೨/೯/೨೦೨೦

ನಿಧನರಾದ ಗಣ್ಯರ ಸಂತಾಪಕ್ಕೆ ಸೀಮಿತವಾದ ಮೊದಲ ದಿನ। ವಾರಾಂತ್ಯದಲ್ಲೆ ಬರಖಾಸ್ತಿಗೆ ಸಹಮತ

# ಕೊರೊನಾದಿಂದ ಕಳೆಗುಂದಿದ ಕಲಾಪ

■ **ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಭೀತಿಯಲ್ಲೆ ಶುರುವಾದ ವಿಧಾನ ಮಂಡಲ ಅಧಿವೇಶನ ಇದೇ ಭಯದ ನೆರಳಲ್ಲೇ ವಾರಾಂತ್ಯಕ್ಕೆ ಮೊಟಕಾಗುವುದು ಖಚಿತವಾಗಿದೆ.

ನಿಗದಿಯಂತೆ ಸೆ.21ರಿಂದ 30ರ ವರೆಗೆ ಕಲಾಪ ನಡೆಯಬೇಕಿದೆ. ಸೋಮವಾರ ಭೋಜನ ವಿರಾಮದ ವೇಳೆ ನಡೆಸಲಾದ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆಯಲ್ಲಿ ಅಧಿವೇಶನವನ್ನು ಶನಿವಾರ(ಸೆ.26) ಅಂತ್ಯಗೊಳಿಸಲು ಆಡಳಿತ ಮತ್ತು ಪ್ರತಿಪಕ್ಷಗಳು ನಡುವೆ ಸಹಮತಕ್ಕೆ ಬಂದಿವೆ.

ನಾನಾ ವಿಧೇಯಕಗಳು ಹಾಗೂ ಜ್ವಲಂತ ಸಮಸ್ಯೆಯ ಬಗ್ಗೆ ಚರ್ಚೆಗೆ ಪ್ರತಿಪಕ್ಷಗಳ ಒತ್ತಡ ಕಾರಣಕ್ಕೆ ಪ್ರಶ್ನೋತ್ತರ ಕಲಾಪ ಮೊಟಕುಗೊಳಿಸಲಾಗುತ್ತಿದೆ. ಶಾಸಕರ ಪ್ರಶ್ನೆಗಳಿಗೆ ಸಚಿವರು ನೀಡಿದ ಲಿಖಿತ ಉತ್ತರವನ್ನು ಸದನದಲ್ಲಿಮಂಡಿಸಲಾಗುತ್ತದೆ. ಮಂಗಳವಾರ ಬೆಳಗ್ಗೆ ಕೊರೊನಾ ಬಗ್ಗೆ ನಿಲುವಳಿ ಸೂಚನೆ ಮಂಡಿಸಲು ಕಾಂಗ್ರೆಸ್ ಮುಂದಾಗಿದೆ.

**ಹೊಂದಾಣಿಕೆ ಸೂತ್ರ:** ಸೋಂಕು ಹೆಚ್ಚಳದ ಕಾರಣಕ್ಕೆ ಅಧಿವೇಶನವನ್ನು ಬುಧವಾರವೇ ಅಂತ್ಯಗೊಳಿಸಲು ಸಿಎಂ ಅವರು ಪ್ರತಿಪಕ್ಷದ ನಾಯಕರಿಗೆ ಕರೆ ಮಾಡಿ ಸಹಕಾರ ಕೋರಿದ್ದರು. ಈ ನಡುವೆ ವಿಧಾನಸಭೆಯಲ್ಲಿ ಮೊದಲ ದಿನದ ಕಲಾಪ ಸಂತಾಪ ಸೂಚನೆಗೆ ಸೀಮಿತವಾಯಿತು. ಭೋಜನ ವಿರಾಮದ ಬಳಿಕ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು. ಪರಿಷತ್‌ನಲ್ಲಿ ಸಂತಾಪ ಸೂಚನೆ ನಂತರ ಪ್ರಶ್ನೋತ್ತರ ಕಲಾಪ ನಡೆಸಲಾಯಿತು. ಭೋಜನದ ಬಳಿಕವೂ ಪರಿಷತ್ ಕಲಾಪ ಮುಂದುವರಿಯಿತು.



ಪರಿಷತ್‌ನಲ್ಲಿ ಸದಸ್ಯರುಗಳ ನಡುವೆ ಅಂತರ ಕಾಪಾಡಲು ಆಸನಗಳ ಮಧ್ಯೆ ಗ್ಲಾಸ್ ಅಳವಡಿಕೆ.

## 90 ಜನರಿಗೆ ಪಾಸಿಟಿವ್

ಜನಪ್ರತಿನಿಧಿಗಳು, ಅಧಿಕಾರಿಗಳು, ಪತ್ರಕರ್ತರಿಗೆ ಶುಕ್ರವಾರ ಹಾಗೂ ಶನಿವಾರ ನಡೆಸಿದ ಕೋವಿಡ್ ಪರೀಕ್ಷೆಯಲ್ಲಿ 90 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಒಂದು ಸಾವಿರ ಜನರ ಪರೀಕ್ಷೆ ನಡೆದಿತ್ತು. ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿ ಮೂರೇ ದಿನಕ್ಕೆ ಕಲಾಪ ಮೊಟಕುಗೊಳಿಸುವ ಬಗ್ಗೆ ಈ ಅಂಕಿ-ಸಂಖ್ಯೆ ಆಧಾರದ ಮೇಲೆಯೇ ಸರಕಾರ ಪ್ರತಿಪಾದಿಸಿತ್ತು ಎಂದು ತಿಳಿದು ಬಂದಿದೆ.

## 139 ಶಾಸಕರು ಮಾತ್ರ ಹಾಜರಿ

ಕೊರೊನಾ ಛಾಯೆ ಆವರಿಸಿದ್ದು, ನಿರೀಕ್ಷೆಯಂತೆ ಸದನಕ್ಕೆ ಶಾಸಕರ ಹಾಜರಿ ಇಳಿಮುಖವಾಗಿದೆ. ಹಾಜರಿ ಪುಸ್ತಕದಲ್ಲಿ ಕೇವಲ 139 ಶಾಸಕರು ಮಾತ್ರ ಸಹಿ ಹಾಕಿದ್ದಾರೆ. ಸಚಿವರು, ಸಚಿವ ಸ್ಥಾನಮಾನದ ಉಪಸಭಾಧ್ಯಕ್ಷರು, ಪ್ರತಿಪಕ್ಷದ ನಾಯಕರು ಹಾಗೂ ನಿಗಮ ಮಂಡಳಿ ಅಧ್ಯಕ್ಷರು ಹಾಜರಿ ಪುಸ್ತಕದಲ್ಲಿ ಸಹಿ ಮಾಡುವಂತಿಲ್ಲ. ಇವರ ಸಂಖ್ಯೆ 53 ಎಂದು ಪರಿಗಣಿಸಿದರೂ ಒಟ್ಟಾರೆ ಗೈರಾದವರ ಸಂಖ್ಯೆ 30ರಿಂದ 32ರಷ್ಟಾಗಬಹುದು.

ಸೋಂಕು ಹರಡದಂತೆ ತಡೆಯಲು ಬಳಸುವ ಫೇಸ್ ಶೀಲ್ಡ್ ಹಾಗೂ ಕಾಗದ ಪತ್ರಗಳನ್ನು ಹಲವು ಶಾಸಕರು ಕುಳಿತುಕೊಳ್ಳುವ ಸ್ಥಳದಲ್ಲೇ ಬಿಟ್ಟು ತೆರಳಿದ್ದಾರೆ. ಕಲಾಪ ಮುಂದೂಡಿಕೆಯಾಗುತ್ತಿದ್ದಂತೆ ಬಹುತೇಕ ಶಾಸಕರು ಗಡಿಬಿಡಿಯಲ್ಲಿ ಸದನದಿಂದ ಎದ್ದು ಹೊರನಡೆದರು. ಕೆಲ ಹಿರಿಯ ಶಾಸಕರು ಫೇಸ್ ಶೀಲ್ಡ್ ಕೊಂಡೊಯ್ಯುವಂತೆ ಸೂಚಿಸಿದಕ್ಕೂ ಅವರು ಕೇಳಿಸಿಕೊಳ್ಳಲಿಲ್ಲ.

## ರೆಸಾರ್ಟ್‌ನಲ್ಲಿ ಎಚ್ಡಿಕೆ ರಿಲ್ಯಾಕ್ಸ್

**ಹಾಸನ:** ಮಾಜಿ ಸಿಎಂ ಕುಮಾರಸ್ವಾಮಿ ತಮ್ಮ ಕುಟುಂಬದೊಂದಿಗೆ ಬೇಲೂರು ರಸ್ತೆಯ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಪತ್ನಿ ಅನಿತಾ ಕುಮಾರಸ್ವಾಮಿ, ಪುತ್ರ ನಿಖಿಲ್ ಹಾಗೂ ಅವರ ಪತ್ನಿ ರೇವತಿ ಅವರೊಂದಿಗೆ ಭಾನುವಾರ ರೆಸಾರ್ಟ್‌ಗೆ ಆಗಮಿಸಿ ತಂಗಿದ್ದರು. ಸೋಮ ವಾರ ಕೂಡ ಇಲ್ಲಿಯೇ ಇದ್ದರು. ಇದೊಂದು ಖಾಸಗಿ ಭೇಟಿ ಎನ್ನಲಾಗಿದೆ ನಿಖಿಲ್ ದಂಪತಿ ಭಾನುವಾರ ಹೇಮಾವತಿ ಜಲಾಶಯಕ್ಕೆ ಬಾಗಿನ ಅರ್ಪಿಸಿದರು ಎಂಬ ಮಾಹಿತಿ ಲಭ್ಯವಾಗಿದೆ.

ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸಹಿತ ಹಲವು ಶಾಸಕರು ಫೇಸ್ ಶೀಲ್ಡ್ ಕೈಗವುಸು ಧರಿಸಿ ಕಲಾಪಕ್ಕೆ ಹಾಜರಾದರು. ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ನೆಗೆಟಿವ್ ಬಂದವರಿಗೆ ಮಾತ್ರ ಪ್ರವೇಶ ಕಲ್ಪಿಸಲಾಯಿತು. ಈ ಸಂಬಂಧ ವಿಧಾನಸಭೆ, ವಿಧಾನ ಪರಿಷತ್ ಸಭಾಂಗಣದ ಬಳಿ ತಪಾಸಣೆ ಮಾಡಲಾಯಿತು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮೊದಲ ದಿನವೇ ಗೈರು ಹಾಜರಾಗಿದ್ದರು.

**ಕೋವಿಡ್ ಆತಂಕದ್ದೇ ಚರ್ಚೆ:** ಮೊದಲ ದಿನ ಶಾಸಕರ ಹಾಜರಿ ತೃಪ್ತಿಕರವಾಗಿದ್ದರೂ ಕೋವಿಡ್ ಆತಂಕದ ಚರ್ಚೆಯೂ ನಡೆಯುತ್ತಿತ್ತು. ಬೇಗ ಅಧಿವೇಶನ ಮುಕ್ತಾಯಗೊಳಿಸುವುದು ಉತ್ತಮವೆಂದು ಶಾಸಕರು ಮಾತನಾಡಿಕೊಳ್ಳುತ್ತಿದ್ದರು. ಹಾಗಾಗಿ ಅಂತಹ ಉತ್ಸಾಹ ಕಂಡುಬರಲಿಲ್ಲ.